ದಿನಾಂಕ 19-03-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ 6 ನೇ ಪ್ರತಿವಾದಿ ಪರ ಶ್ರೀ ಎಮ್.ಎಮ್ ವಕೀಲರಿಂದ.**

ನನ್ನ ತಂದೆಯ ಹೆಸರು ಬಸವಂತ್ರಾಯ ಆಗಿರುತ್ತದೆ. ನನ್ನ ತಂದೆ ಬಸವಂತ್ರಾಯ ರವರು ತೀರಿಕೊಂಡು ತುಂಬಾ ವರ್ಷ ಆಗಿರುತ್ತದೆ. ನನ್ನ ತಾಯಿಯ ಹೆಸರು ಬಸ್ಸಮ್ಮ ಆಗಿರುತ್ತದೆ. ನನ್ನ ತಾಯಿ ತೀರಿಕೊಂಡು ತುಂಬಾ ವರ್ಷ ಆಗಿರುತ್ತದೆ. ನನ್ನ ತಂದೆ-ತಾಯಿಗೆ ನಾವು 06 ಜನ ಮಕ್ಕಳಿದ್ದು ಅದರಲ್ಲಿ ಇಬ್ಬರು ತೀರಿಕೊಂಡಿರುತ್ತಾರೆ. ನನ್ನ ತಂದೆ-ತಾಯಿಯ ಮಕ್ಕಳ ಹೆಸರು ಶರಣಮ್ಮ, ಶಾರದಮ್ಮ, ಅಕ್ಕನಾಗಮ್ಮ, ಸುಧಾ, ನಾನು ಮತ್ತು ಮಿನಾಕ್ಷಮ್ಮ ಆಗಿರುತ್ತಾರೆ, ಇದರಲ್ಲಿ ಶರಣಮ್ಮ ಹಾಗೂ ಶಾರದಮ್ಮ ರವರು ತೀರಿಕೊಂಡಿರುತ್ತಾರೆ. ಶರಣಮ್ಮ ರವರು ಮದುವೆಯಾದ ಮೇಲೆ ತೀರಿಕೊಂಡಿರುತ್ತಾರೆ. 5 ನೇ ಪ್ರತಿವಾದಿ ಶರಣಮ್ಮ ರವರ ಮಗಳು ಆಗಿರುತ್ತಾರೆ. 4 ನೇ ಪ್ರತಿವಾದಿ ಶಾರದಮ್ಮ ರವರ ಮಗ ಆಗಿರುತ್ತಾರೆ. 6 ನೇ ಪ್ರತಿವಾದಿಯೂ ಕೂಡ ಶಾರದಮ್ಮ ರವರ ಮಗ ಎಂದರೆ ನಿಜ. ದಾವಾ ಆಸ್ತಿಗಳಲ್ಲಿ ನನಗೆ ಎಷ್ಟು ಭಾಗ ಇದೆಯೋ ಅಷ್ಟೆ ಭಾಗ ಶಾರದಮ್ಮ ರವರ ಮಕ್ಕಳಾದ 4 ಮತ್ತು 6 ನೇ ಪ್ರತಿವಾದಿಗಳಿಗೆ ಅಷ್ಟೆ ಭಾಗ ಇರುತ್ತದೆ ಎಂದರೆ ನಿಜ. ಶಾರದಮ್ಮ ರವರ ಭಾಗಕ್ಕೆ ಬರಬೇಕಾದ ಜಮೀನಿನಲ್ಲಿ 4 ಮತ್ತು 6 ನೇ ಪ್ರತಿವಾದಿಗಳು ಜಮೀನುಗಳನ್ನು ಸಮಾನ ಪಾಲು ಮಾಡಿಕೊಳ್ಳಬಹುದು ಎಂದರೆ ನಿಜ. ನಾವು ಉದ್ದೇಶಪೂರ್ವಕವಾಗಿ 6 ನೇ ಪ್ರತಿವಾದಿಯನ್ನು ಈ ದಾವೆಯಲ್ಲಿ ಸೇರಿಸಿರಲಿಲ್ಲ ಎಂದರೆ ಸರಿಯಲ್ಲ. ನಾವು 6 ನೇ ಪ್ರತಿವಾದಿಯನ್ನು ಉದ್ದೇಶಪೂರ್ವಕವಾಗಿ ಈ ದಾವೆಯಲ್ಲಿ ಸೇರಿಸದೇ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವುಗಳು 6 ನೇ ಪ್ರತಿವಾದಿಯನ್ನು ಹೊರಗಿಟ್ಟು ಈ ದಾವೆಯನ್ನು ರಾಜಿ ಮಾಡಿಕೊಳ್ಳಲು ಮುಂದಾಗಿದ್ದೆವು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ 6 ನೇ ಪ್ರತಿವಾದಿಗೂ ಸಹ ಭಾಗ ಇದೆ ಎಂದರೆ ನಿಜ.

ಮರುವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)**

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.